# ಎಲ್ಲ ಕಾಲದ ಪ್ರಕಾಶ



ಬುದ್ಧದೇವ ಜೀವಿಸಿದ್ದ ಕಾಲವನ್ನು ಭಾರತದ ಜ್ಞಾನ ಯುಗ ಎಂದು ಕರೆಯಲಾಗಿದೆ. ಬುದ್ಧದೇವನ ಧರ್ಮದ ಕಲ್ಪನೆಯು ಶುದ್ಧ ನೈತಿಕವಾದದ್ದು. ಎಲ್ಲ ಧರ್ಮಗಳ ಮೂಲ ತತ್ತ್ವಗಳನ್ನು ಅದರ ಅನುಯಾಯಿಗಳು ಒಂದಲ್ಲ ಒಂದು ಅತಿರೇಕದ ಅಂಚಿಗೆ ಎಳೆದು ಅಸಹನೀಯಗೊಳಿಸುತ್ತಿರುವ ಇಂದಿನ ದಿನಗಳಲ್ಲಿ ಬೌದ್ಧ ದರ್ಶನವೊಂದೇ 'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬ ಉನ್ನತ ಆದರ್ಶವನ್ನು ಒಳಗೊಂಡು, ನುಡಿದು–ನಡೆಯುವ ಪಥವಾಗಿದೆ. ಕಾಲ ದೇಶಗಳಿಗೆ ಅನುಗುಣವಾಗಿ ಕಲೆ, ಸಾಹಿತ್ಯ, ಶಿಲ್ಪ ಮತ್ತು ತಾತ್ವಿಕ ಚಿಂತನೆಗಳಿಗೆ ಕೊಡುಗೆಯನ್ನು ನೀಡುತ್ತಾ ವಿಕಾಸಗೊಳ್ಳುತ್ತಾ ಬರುತ್ತಿದೆ.

'ಬೌದ್ಧ ದರ್ಶನ'ದ ಮುಖ್ಯ ಗುರಿ ಲೋಕದ ಜೀವಿಗಳನ್ನು ಸಂಕಟಗಳಿಂದ ಬಿಡುಗಡೆ ಗೊಳಿಸುವುದು, ಜೀವಿಗಳು ಸಾಮರಸ್ಯದಿಂದ ಬಾಳಲು ಅನುವು ಮಾಡಿಕೊಡುವುದು. ಜಾತಿ ಪದ್ಧತಿ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಪ್ರಭುತ್ವದ ರಾಜ್ಯದಾಹ, ಹಿಂಸೆ, ಕ್ರೌರ್ಯಗಳನ್ನು ತಿರಸ್ಕರಿಸಿದ ಬುದ್ಧದೇವ ಹಿಂಸೆ, ದುಃಖವಿಲ್ಲದ ಉನ್ನತಾದರ್ಶದ ನೈತಿಕತೆಯ ಅಸ್ತಿವಾರದ ಮೇಲೆ ಸಮಾಜ ಇರಬೇಕೆಂದು ಧ್ಯಾನಿಸಿದ ಪರಿವರ್ತನಕಾರ. ಬಹುತೇಕ ಧರ್ಮಗಳು ಮಾನವನ ಸಾರ್ಥಕ್ಯವನ್ನು ಅವನ ಸಾವಿನ ನಂತರ ಲೋಕೋತ್ತರವಾಗಿ ಕಂಡರೆ, ಬೌದ್ಧತತ್ತ್ವ ಮಾತ್ರ ಮಾನವನ ಸಾರ್ಥಕ್ಯವನ್ನು ಅವನ ಜೀವಿತಾವಧಿಯಲ್ಲಿಯೇ ಕಾಣಲು ಬಯಸುತ್ತದೆ.

ಧರ್ಮ, ಆತ್ಮ, ಸ್ವರ್ಗ–ನರಕ, ಊಹೆ ಇವುಗಳೆಲ್ಲ ಜಿಜ್ಞಾಸೆಯ ತೊಡಕು. ಇವುಗಳಿಗೆ ಬೌದ್ಧದರ್ಶನ ಉತ್ತರಿಸಲಾರದು. ಸನ್ಯಾಸ ಮತ್ತು ತೃಪ್ತಿಯು ವಿಶ್ವ ಮತ್ತು ದೇವರ ಕುರಿತ ಜ್ಞಾನದಲ್ಲಿಲ್ಲ, ಬದಲಾಗಿ ನಿಸ್ವಾರ್ಥ ಮತ್ತು ಉದಾರ ಬದುಕಿನಲ್ಲಿದೆ ಎಂದು ಬೌದ್ಧದರ್ಶನ ತಿಳಿಸುತ್ತದೆ. ಬುದ್ಧದೇವನ ಬೋಧನೆಗಳು ಸಂವಾದ, ಪ್ರವಚನ ಹಾಗೂ ದೃಷ್ಟಾಂತಗಳ ಮೂಲಕ ಇರುತ್ತಿತ್ತು. ಒಮ್ಮೆ ಬ್ರಾಹ್ಮಣನೊಬ್ಬ ಗಂಗೆಯಲ್ಲಿ ಮಿಂದು ಪಾಪವನ್ನು ಪರಿಹರಿಸಿಕೊಳ್ಳಲು ಹೋಗುವುದನ್ನು ಕಂಡ ಬುದ್ಧದೇವ 'ನೀನು ಸುಳ್ಳು ಹೇಳದಿದ್ದರೆ, ಜೀವಹಾನಿ ಮಾಡದಿದ್ದರೆ, ನಿನಗೆ ನೀಡದ್ದನ್ನು ತಗೆದುಕೊಳ್ಳದಿದ್ದರೆ, ಸ್ವಾರ್ಥವನ್ನು ತ್ಯಜಿಸುವವನಾಗಿದ್ದರೆ, ನೀನು ಗಂಗೆಗೆ, ಗಯೆಗೆ ಹೋಗಿ ಮಿಂದು ಬಂದರೇನು ಪ್ರಯೋಜನ?' ಎಂದು ಕೇಳಿದ. ಸಾಮಾಜಿಕ ಬದುಕಿನಲ್ಲಿರುವ ಸ್ವಾರ್ಥ, ದುಃಖ–ವೈಷಮ್ಯಗಳ ನಿವಾರಣೆಗೆ, ಸಾಮಾಜಿಕ ನೆಲೆಯಲ್ಲಿಯೇ ಉತ್ತರವನ್ನು ಕಂಡುಕೊಳ್ಳುವುದರಲ್ಲಿಯೇ ಬೌದ್ಧತತ್ತ್ವದ ವಿಶಿಷ್ಟತೆ ಇರುವುದು.

ಬೌದ್ಧದರ್ಶನದ ಮಹತ್ವವೆಂದರೆ, ಇವು ಬುದ್ಧದೇವ ಎಂದೋ ಹೇಳಿದ, ಆಗಿಹೋದ ವಿಚಾರಗಳಲ್ಲ! ಬೋಧನೆಯಲ್ಲ! ನಮ್ಮ ವರ್ತಮಾನದಲ್ಲೂ ನಮ್ಮೊಂದಿಗೆ ನಿಲ್ಲಬಲ್ಲ, ನಮ್ಮ ಬಾಳನ್ನು ಸಹ್ಯವಾಗಿಸಿಕೊಡಬಲ್ಲ ಅರಿವಿನ ದಾರಿ. ಬುದ್ಧ ತತ್ತ್ವಗಳು ಹಾರುವವನಿಗೆ ರೆಕ್ಕೆ. ನಮ್ಮ ಸುತ್ತಲಿನ ಪ್ರಪಂಚವನ್ನು ಅದು ಇರುವಂತೆಯೇ ನಮಗೆ ಅರ್ಥೈಸುತ್ತದೆ. ವಿಜ್ಞಾನದ ಫಲಿತದಂತೆ ಬೌದ್ಧ ದರ್ಶನವೂ ಕೂಡ ಧರ್ಮ, ಭಾಷೆ, ಜನಾಂಗ ಹಾಗೂ ಭೌಗೋಳಿಕತೆಯನ್ನು ದಾಟಿ ಎಲ್ಲಾ ಜೀವಿಗಳಿಗೂ ಸತ್ಯಪಥವನ್ನು ತೋರಿಸಿಕೊಡುವ ಲೋಕದ ಬೆಳಕು. 2500 ವರ್ಷಗಳಿಂದ ಜಗತ್ತನ್ನು ಎರಡು ಬೆಳಕುಗಳು ಬೆಳಗುತ್ತಿವೆ. ಒಂದು: ಸೂರ್ಯ, ಮತ್ತೊಂದು: ಬುದ್ಧದೇವ.

ಬೌದ್ಧದರ್ಶನವು ಕೇವಲ ವ್ಯಕ್ತಿಯೊಬ್ಬನ ಬಿಡುಗಡೆಯ ದಾರಿ ಮಾತ್ರ ಅಲ್ಲ; ಎಲ್ಲ ಜೀವಿಗಳ ಬಿಡುಗಡೆಯಲ್ಲಿಯೇ ತನ್ನ ಬಿಡುಗಡೆಯನ್ನು ಹಾಗೂ ಬಹುತ್ವದ ಸಮಾಜ ಅರಳುವಂತೆ ಮಾಡುವ ಒಂದು ಮುಕ್ತ ವ್ಯವಸ್ಥೆ. ಜ್ಞಾನವನ್ನು ಪಡೆದುಕೊಳ್ಳುವಷ್ಟೇ ಭಿಕ್ಷುಗಳ ಕರ್ತವ್ಯವಾಗಿರದೆ, ಜನತೆಯ ಜೀವನದ ಒಳಿತಿಗಾಗಿಯೂ ಭಿಕ್ಷು ಶ್ರಮಿಸಬೇಕೆಂದು ಬುದ್ಧದೇವ ಸ್ಪಷ್ಟಪಡಿಸಿದ್ದ. 'ಜನರ ನಡುವೆ ಓಡಾಡಿ. ಅವರೊಂದಿಗೆ ಬೆರೆಯಿರಿ. ಅವರ ದುಃಖ ದುಮ್ಮಾನಗಳೊಂದಿಗೆ ಸ್ಪಂದಿಸಿರಿ. ಬಹುಜನರ ಹಿತವನ್ನು ಕಾಯುವುದೇ ಭಿಕ್ಷುಗಳ ಜೀವನ ಧ್ಯೇಯವಾಗಲಿ. ಅರ್ಪಣಾ ಮನೋಭಾವ ಹಾಗೂ ರೋಗಿಗಳು ಮತ್ತು ದುಃಖಿತರ ಸೇವೆ ಬೌದ್ಧ ಭಿಕ್ಷುಗಳ ಜೀವನಮಾರ್ಗ' ಎಂಬುದು ಬೌದ್ಧದರ್ಶನದ ತಿಳಿವು. ಗುರುದೇವ ರವೀಂದ್ರರು ಹೇಳುತ್ತಾರೆ: 'ಸಕಲರಲ್ಲಿ ತನ್ನನ್ನೂ, ತನ್ನೊಳಗೆ ಸಕಲವನ್ನೂ ಕಾಣಲು ಯಾವನು ಬಲ್ಲನೊ ಅವನನ್ನು ಇನ್ನು ಗೋಪ್ಯವಾಗಿರಿಸಲು ಸಾಧ್ಯವಿಲ್ಲ. ಎಲ್ಲ ಕಾಲದ ಪ್ರಕಾಶ ಅವನದು.'

'ಬೌದ್ಧದರ್ಶನದಲ್ಲಿ ಪ್ರಾರ್ಥನೆಯ ಮೇಲೆ ಒತ್ತು ನೀಡಲಾಗಿಲ್ಲ. ಬುದ್ಧನು ಜಗತ್ತಿಗೆ ನೀಡಿದ ತ್ರಿರತ್ನಗಳಾದ ಶೀಲ, ಸಮಾಧಿ, ಪ್ರಜ್ಞಾಗಳಲ್ಲಿ ಧ್ಯಾನ ಕೇಂದ್ರ ಸ್ಥಾನದಲ್ಲಿದೆ. ದುಃಖವೆನ್ನುವುದು ಮನೋಮೂಲವಾದ್ದರಿಂದ, ಆ ಮನಸ್ಸಿನ ಆಸೆಯೆಂಬ ವ್ಯಾಧಿಗೆ ಧ್ಯಾನವೇ ಔಷಧಿ. ಧ್ಯಾನ ಸಂಸ್ಕೃತಿಯನ್ನು ವಿಶ್ವದಾದ್ಯಂತ ಪ್ರಚಾರಮಾಡಿದ ಬೌದ್ಧಧರ್ಮ ಮಾನವ ಸ್ವಾಸ್ಥ್ಯಕ್ಕೆ ದೊಡ್ಡ ಕೊಡುಗೆಯನ್ನು ನೀಡಿದೆ. ಹೀಗೆ ಬೌದ್ಧಧರ್ಮ ನಶ್ವರವೆಂದು ಕರೆದ ಜಗತ್ತನ್ನು ಹೆಚ್ಚು ಸಹ್ಯವಾಗಿಯೂ, ಸುಂದರವಾಗಿಯೂ ಮಾಡಿದೆ' (ಎಚ್.ಎಸ್. ಶಿವಪ್ರಕಾಶ್).

'ಬುದ್ಧತ್ವ' ಎನ್ನುವುದು ಪ್ರತಿಯೊಂದು ಜೀವಿಗಳಲ್ಲೂ ಇರುತ್ತದೆ. ಅದನ್ನು ಹೊರತಗೆದು, ಹೊಳಪು ನೀಡುವ ಕೆಲಸವನ್ನು ಬೌದ್ಧದರ್ಶನ ಮಾಡುತ್ತದೆ. ಒಳಿತು–ಕೆಡುಕು ಈ ಎರಡೂ ನಮ್ಮಲ್ಲೇ ಇದೆ. ಮನುಷ್ಯ ಕೆಡುಕಿನಿಂದ ದೂರವಾಗುತ್ತಾ, ಒಳಿತಿನ ಕಡೆಗೆ ಸಾಗಿದಷ್ಟೂ ಅವನ ಬದುಕು ಸಹ್ಯವಾಗುತ್ತಾ ಹೋಗುತ್ತದೆ. ಆಗ ಮಾನವ ಸಮಾಜಕ್ಕೂ ಪ್ರಕೃತಿಗೂ ಸಹ್ಯವಾಗುತ್ತಾ ಜೀವಿಸುತ್ತಾನೆ. ಇದನ್ನೆ ವಜ್ರಾಯಾನ ಹೀಗೆ ಹೇಳುತ್ತದೆ 'ಪ್ರತಿಯೊಬ್ಬ ವ್ಯಕ್ತಿಯ ಮನಸ್ಸೂ ಒಂದು ವಜ್ರವೇ. ಆದರೆ ಅದು ಲೌಕಿಕದ ರಾಗ–ದ್ವೇಷ–ವ್ಯಸನ–ವ್ಯಾಮೋಹಗಳಲ್ಲಿ ಸಿಲುಕಿ ರೋಗಗ್ರಸ್ತವಾಗಿರುವಾಗ ಅದು ಕೇವಲ ಇಂಗಾಲ (ಇದ್ದಿಲು) ಆಗಿರುತ್ತದೆ. ಅದೇ ಮನಸ್ಸು ಲೌಕಿಕದ ಸಿಕ್ಕುಗಳಿಂದ ದೂರವುಳಿದಾಗ, ರೋಗಮುಕ್ತವಾಗಿ ಅದು ವಜ್ರವಾಗುತ್ತದೆ' ಹೀಗೆ ಬಿಡುಗಡೆ ಪಡೆದ ಪ್ರತಿಯೊಬ್ಬ ಜೀವಿಯೂ ಬುದ್ಧನಾಗುತ್ತಾನೆ.

ಶಾಕ್ಯಮುನಿ ಬುದ್ಧದೇವನಿಂದ ಪ್ರಣೀತವಾದ ಬೌದ್ಧದರ್ಶನದ ಬೆಳಕು ಕಗ್ಗತ್ತಲಲ್ಲುಳಿದು ಬೆಳಕಿನ ದಾಹದಲ್ಲಿರುವ ಸಮಾಜದ ಕಣ್ಣುಗಳಿಗೆ ದಾರಿದೀಪ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಸಾವಿರಾರು ಮೈಲಿಗಳ ಪಯಣ ಶುರುವಾಗುವುದೇ ಒಂದು ಹೆಜ್ಜೆಯಿಂದ.
  —ಲಾವೋ ತ್ಸು
- ಪ್ರತಿಭೆ ನಿಜವಾಗಿಯೂ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು. ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ತೆರೆಯುತ್ತದೆ.
  —ತೀ.ನಂ.ಶ್ರೀ.
- ವಿವೇಕ ಎಂಬ ಪುಸ್ತಕದ ಮೊದಲ ಅಧ್ಯಾಯವೇ ಪ್ರಾಮಾಣಿಕತೆ.
  —ಥಾಮಸ್ ಜೆಫರ್‌ಸನ್
- ನಾನು ದಾರಿಯನ್ನು ಹುಡುಕುವೆ ಅಥವಾ ಹೊಸ ದಾರಿಯನ್ನು ಮಾಡುವೆ.
  —ಫಿಲಿಪ್ ಸಿಡ್ನಿ
- ಪರರನ್ನು ಅರಿವುದು ಬುದ್ಧಿವಂತಿಕೆ ಎಂದು ಭಾವಿಸಬೇಡಿ. ವ್ಯಕ್ತಿಯೊಬ್ಬ ತನ್ನನ್ನು ತಾನು ಅರಿವುದೇ ಜ್ಞಾನೋದಯ.
  —ಲಯೊ ಜು
- ನಂಬಿಕೆ ಇರಬೇಕು, ನಂಬಿಕೆಗೆ ಕಣ್ಣಿರಬೇಕು, ನಂಬಿಕೆಯ ಕಣ್ಣು ತೆರೆದಿರಬೇಕು; ಆಗ ನಂಬಿಕೆಯ ನಂಬಬಹುದು.
  ಎಸ್.ವಿ. ರಂಗಣ್ಣ